ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

## ಮಲ್ಲೇಶ್ವರಂ, ಬೆಂಗಳೂರು-560003

ಸಂಖ್ಯೆ : ಗಣಕಶಾಖೆ/ಎಸ್.ಎಸ್.ಎಲ್.ಸಿ./ಗು.ಫ.ಲೆ/01/2020-21 ದಿನಾಂಕ: 20-11-2020

**- ಸುತ್ತೋಲೆ -**

**ವಿಷಯ: ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಶಾಲಾ ಶ್ರೇಣಿ ನಿರ್ಧರಿಸುವ ಬಗ್ಗೆ**

**ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಪಿ 83 ಎಂ.ಹೆಚ್.ಟಿ. ಮಾಹಿತಿ 2020 ದಿನಾಂಕ 06-07-2020**

*******

ಸಾರ್ವಜನಿಕ ಶಿಕ್ಷಣ ಇಲಾಖೆಯು ಪ್ರತಿ ವರ್ಷ 10ನೇ ತರಗತಿಯ ಫಲಿತಾಂಶ ಪ್ರಕಟಿಸಿದ ನಂತರ ವಿದ್ಯಾರ್ಥಿಗಳ ಸಾಧನೆಯನ್ನು ಉತ್ತೀರ್ಣತಾ ಪ್ರಮಾಣದ ಆಧಾರದ ಮೇಲೆ ಪರಿಮಾಣಾತ್ಮಕವಾಗಿ (Quantitative) ಅವಲೋಕಿಸಿ ಶಾಲೆಗಳ ಸಾಧನೆಯನ್ನು ನಿರ್ಧರಿಸಲಾಗುತ್ತಿತ್ತು. ಈ ಪದ್ಧತಿಯಲ್ಲಿ ವಿದ್ಯಾರ್ಥಿಗಳ ಉತ್ತೀರ್ಣತೆಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಲಾಗುತಿತ್ತೇ ಹೊರತು, ವಿದ್ಯಾರ್ಥಿಗಳ ಅಂಕಗಳೊಂದಿಗೆ ಅವರ ಸಾಮರ್ಥ್ಯ ಪರಿಗಣನೆಯಾಗುತ್ತಿರಲಿಲ್ಲ.

ಆದ್ದರಿಂದ, ಕೇವಲ ವಿದ್ಯಾರ್ಥಿಗಳ ತೇರ್ಗಡೆ ಪ್ರಮಾಣವನ್ನು ಗುರಿಯಾಗಿಟ್ಟುಕೊಳ್ಳದೇ ಅದರೊಂದಿಗೆ ಗುಣಾತ್ಮಕವಾಗಿಯೂ (Qualitative) ಫಲಿತಾಂಶವನ್ನು ಅಳೆಯುವ ನೂತನ ಪದ್ಧತಿಯನ್ನು 2019-20ನೇ ಸಾಲಿನಿಂದ ಅಳವಡಿಸಿಕೊಳ್ಳಲಾಗಿದೆ. ಈ ಪದ್ಧತಿಯ ಮೂಲಕ ಗುಣಾತ್ಮಕ ಶಿಕ್ಷಣ ನೀತಿಯ ಅನುಷ್ಠಾನಕ್ಕೆ ಕ್ರಮ ವಹಿಸಲು ಅನುಕೂಲಕರವಾಗಲೆಂದು ಎಸ್.ಎಸ್.ಎಲ್.ಸಿ. ಪರೀಕ್ಷೆ ತೆಗೆದುಕೊಂಡ ರೆಗ್ಯುಲರ್ ವಿದ್ಯಾರ್ಥಿಗಳ ಸಾಧನೆಯನ್ನು ಆಧಾರವಾಗಿಟ್ಟುಕೊಂಡು ಶಾಲೆಗಳಿಗೆ ಗುಣಾತ್ಮಕ ಫಲಿತಾಂಶದ ಶ್ರೇಣಿಯನ್ನು ಈ ಕೆಳಗಿನ ಮಾನದಂಡಗಳ ಮೇಲೆ ನಿರ್ಧರಿಸಲಾಗುತ್ತಿದೆ.

**ಶಾಲೆಗಳ ಗುಣಾತ್ಮಕ ಫಲಿತಾಂಶದ ಶ್ರೇಣಿಯನ್ನು ಲೆಕ್ಕಾಚಾರ ಮಾಡುವ ಮಾನದಂಡ**

| ಕ್ರ.ಸಂ | ಮಾನದಂಡ | ಪರಿಗಣಿಸಬೇಕಾದ ಶೇಕಡಾವಾರು ಪ್ರಾಮುಖ್ಯತೆ (Weightage)% |
|---|---|---|
| 1 | ಉತ್ತೀರ್ಣತಾ ಪ್ರಮಾಣ | 40% |
| 2 | ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಸರಾಸರಿ ಅಂಕ | 40% |
| 3 | ಪ್ರಥಮ ದರ್ಜೆ ಮತ್ತು ಅತ್ಯುನ್ನತ ದರ್ಜೆಯ ಉತ್ತೀರ್ಣತಾ ಪ್ರಮಾಣ | 20% |

**ಶ್ರೇಣಿಗಳ ಆಧಾರದ ಮೇಲೆ ಶಾಲೆಗಳನ್ನು ವರ್ಗೀಕರಿಸುವ ವಿಧಾನ**

| ಕ್ರ.ಸಂ | ಗುಣಾತ್ಮಕ ಫಲಿತಾಂಶದ ಶೇಕಡಾ | ಶ್ರೇಣಿ |
|---|---|---|
| 1 | 75 and above | A |
| 2 | 60 and above to below 75 | B |
| 3 | Below 60 | C |

ಉದಾಹರಣೆಗೆ,

HH0001 – ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ಮಡಿಕೇರಿ, ಕೊಡಗು ಜಿಲ್ಲೆ

1. **ಶೇಕಡಾವಾರು ಉತ್ತೀರ್ಣತಾ ಪ್ರಮಾಣದ ಲೆಕ್ಕಾಚಾರ**

ಒಟ್ಟು ಪರೀಕ್ಷೆ ತೆಗೆದುಕೊಂಡವರು : **66**
ಒಟ್ಟು ಉತ್ತೀರ್ಣರಾದವರು : **56**

$$\text{ಉತ್ತೀರ್ಣತಾ ಪ್ರಮಾಣದ ಶೇಕಡಾವಾರು} = \frac{\text{ಒಟ್ಟು ಉತ್ತೀರ್ಣರಾದವರು}}{\text{ಒಟ್ಟು ಪರೀಕ್ಷೆ ತೆಗೆದುಕೊಂಡವರು}} * 100 = \frac{56}{66} * 100 = 84.85\%$$

2. **ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಶೇಕಡಾವಾರು ಸರಾಸರಿ ಅಂಕದ ಲೆಕ್ಕಾಚಾರ**

ಪರೀಕ್ಷೆ ತೆಗೆದುಕೊಂಡ ಎಲ್ಲಾ ವಿದ್ಯಾರ್ಥಿಗಳ ಒಟ್ಟು ಗರಿಷ್ಠ ಅಂಕಗಳು = 41250
ಪರೀಕ್ಷೆ ತೆಗೆದುಕೊಂಡ ಎಲ್ಲಾ ವಿದ್ಯಾರ್ಥಿಗಳು ಪಡೆದ ಒಟ್ಟು ಅಂಕಗಳು = **24589**

$$\text{ಶೇಕಡಾವಾರು ಸರಾಸರಿ ಅಂಕಗಳು} = \frac{\text{ಪರೀಕ್ಷೆ ತೆಗೆದುಕೊಂಡ ಎಲ್ಲಾ ವಿದ್ಯಾರ್ಥಿಗಳು ಪಡೆದ ಒಟ್ಟು ಅಂಕಗಳು}}{\text{ಪರೀಕ್ಷೆ ತೆಗೆದುಕೊಂಡ ಎಲ್ಲಾ ವಿದ್ಯಾರ್ಥಿಗಳ ಒಟ್ಟು ಗರಿಷ್ಠ ಅಂಕಗಳು}} * 100$$

$$\text{ಶೇಕಡಾವಾರು ಸರಾಸರಿ ಅಂಕಗಳು} = \frac{24589}{41250} * 100 = 59.61\%$$

3. **ಪ್ರಥಮ ದರ್ಜೆ ಮತ್ತು ಅತ್ಯುನ್ನತ ದರ್ಜೆಯ ಶೇಕಡಾವಾರು ಉತ್ತೀರ್ಣತಾ ಪ್ರಮಾಣ**

ಒಟ್ಟು ಹಾಜರಾದವರು : **66**
ಪ್ರಥಮ ದರ್ಜೆ ಮತ್ತು ಅತ್ಯುನ್ನತ ದರ್ಜೆಯಲ್ಲಿ ಒಟ್ಟು ಉತ್ತೀರ್ಣರಾದವರು : **32**

**ಪ್ರಥಮ ದರ್ಜೆ ಮತ್ತು ಅತ್ಯುನ್ನತ ದರ್ಜೆಯ ಶೇಕಡಾವಾರು ಉತ್ತೀರ್ಣತಾ ಪ್ರಮಾಣ =**

$$\frac{\text{ಪ್ರಥಮ ದರ್ಜೆ ಮತ್ತು ಅತ್ಯುನ್ನತ ದರ್ಜೆಯಲ್ಲಿ ಒಟ್ಟು ಉತ್ತೀರ್ಣರಾದವರು}}{\text{ಒಟ್ಟು ಹಾಜರಾದವರು}} * 100 = \frac{32}{66} * 100 = 48.48\%$$

ಆದ್ದರಿಂದ, **ಶಾಲೆಯ ಗುಣಾತ್ಮಕ ಫಲಿತಾಂಶದ ಶೇಕಡಾವಾರು =**

= 40% of **(1)** + 40% of **(2)** + 20% of **(3)** = 40% of **84.85** + 40% of **59.61** + 20% of **48.48**

= 33.94 + 23.84 + 9.69

= **67.47 % → 'B' GRADE**

ಈ ಮೇಲ್ಕಂಡಂತೆ ಲೆಕ್ಕಾಚಾರ ಮಾಡಿದಾಗ HH0001 – ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ಮಡಿಕೇರಿ, ಕೊಡಗು ಜಿಲ್ಲೆಯ ಶಾಲೆಯು 'ಬಿ' ಶ್ರೇಣಿ ಪಡೆದಿರುತ್ತದೆ.

2019-20 ನೇ ಸಾಲಿನ ಪರೀಕ್ಷೆಯ ಫಲಿತಾಂಶ ಪಟ್ಟಿಗಳ ಕೊನೆಯಲ್ಲಿ ಈ ರೀತಿಯ ಗುಣಾತ್ಮಕ ಫಲಿತಾಂಶದ ಲೆಕ್ಕಾಚಾರದ ವಿವರಗಳನ್ನು ನೀಡಲಾಗಿದೆ. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳ ಗುಣಾತ್ಮಕ ಫಲಿತಾಂಶದ ವಿವರಗಳನ್ನು ಅವಲೋಕಿಸಿ ಗುಣಾತ್ಮತೆಯನ್ನು ಹೆಚ್ಚಿಸಿಕೊಳ್ಳಲು ಕ್ರಮ ವಹಿಸುವುದು.

(ಸುಮಂಗಲ ವಿ) 23/11/20
ನಿರ್ದೇಶಕರು, (ಪರೀಕ್ಷೆಗಳು)

ಅಗತ್ಯ ಕ್ರಮಕ್ಕಾಗಿ :

1. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ
4. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪ್ರೌಢಶಾಲೆಯ ಮುಖ್ಯಸ್ಥರುಗಳಿಗೆ
5. ನಿರ್ದೇಶಕರು (ಪರೀಕ್ಷೆಗಳು) / ಕಾರ್ಯದರ್ಶಿಗಳ ಆಪ್ತ ಶಾಖೆಗೆ
6. ಮಂಡಳಿಯ ಎಲ್ಲಾ ಶಾಖೆಗಳ ಶಾಖಾಧಿಕಾರಿಗಳಿಗೆ
7. ಕಛೇರಿ ಪ್ರತಿ